

ಭಗವಾನ್ ಶ್ರೀ ರಮಣಮಹರ್ಷಿ ವಿರಚಿತ

ಸದ್ದರ್ಶನ

(ಭಗವಾನರೇ ರಚಿಸಿರುವ ಮೂಲ ತೆಲುಗು ವ್ಯಾಖ್ಯಾನದ ಕನ್ನಡ ಅನುವಾದದೊಡನೆ)

ಪದ್ಯಾನುವಾದ – ಕನ್ನಡ ಭಾವಾರ್ಥ

ಎಂ.ಆರ್. ಚಂದ್ರಮೌಳಿ

Once Bhagavan composed twenty Tamil stanzas containing his important teachings. They were not written in any particular order to form a poem. Sri Muruganar therefore suggested that Bhagavan should write twenty stanzas more to make it the conventional forty.Accordingly,Bhagavan composed twenty more stanzas. Out of these forty, Kavyakanta Ganapati Muni selected two as the invocatory stanzas. Then Bhagavan wrote two more to complete the forty. Some of the stanzas were translations from Sanskrit, but as devotees wanted all the forty verses to be original they were eliminated and new stanzas composed in their place. The verses were all arranged in a continuous order to form a poem. Later, a supplement consisting of a second forty verses was added. So indifferent to authorship was Bhagavan that he did not write all those supplementary verses himself. When he came upon a suitable one he used it -- mostly translations from Sanskrit -- and when not, he made one. The verses eliminated from the original forty verses were included in the supplement.

(I acknowledge with thanks the adept english translation of Saddarshanam by Pro. K. Swaminathan used in this book -Chandramowly)



ಮನಸ್ಸು, ಬುದ್ಧಿ ಮತ್ತು ಅಹಂಕಾರಗಳ

ಭೌತಿಕ ಶರೀರವನ್ನು ನನಗೆ ನೀಡಿದ ನನ್ನ ತೀರ್ಥರೂಪರು, ಕೀರ್ತಿಶೇಷರಾದ

ಮತ್ತಕೂರು ರಾಜಣ್ಣನವರ ಸ್ಮರಣೆಗೆ

ಮತ್ತು



ಶರೀರ, ಜಗತ್ತು ಇವುಗಳ "ಬಂಧನ"ದಿಂದ ಬಿಡುಗಡೆ "ಮೋಕ್ಷ"ವಲ್ಲ ; "ಬಂಧನ" ಇಲ್ಲವೆಂಬ ತಿಳಿವೇ ನಿಜವಾದ ಜ್ಞಾನ ಎಂಬ ಅರಿವು ಮೂಡಿಸಿದ ಪರಮಪೂಜ್ಯ **ಸ್ವಾಮಿ ಬ್ರಹ್ಮಾನಂದರ** ಚರಣದಲ್ಲಿ ಈ ಕಿರುಕೃತಿ ಒಂದು ಪಾದಪುಷ್ಪ.

ಬಿನ್ನಹ

ಭಗವಾನ್ ಶ್ರೀ ರಮಣಮಹರ್ಷಿಗಳು, ವೇದಾಂತ ಸಾರವನ್ನೆಲ್ಲ ನಲವತ್ತು ಪದ್ಯಗಳಲ್ಲಿ ಘನೀಕರಿಸಿ, ಉಳ್ಳದು ನಾರ್ಪದು ಎಂಬ ಗ್ರಂಥವನ್ನು ತಮಿಳು ಭಾಷೆಯಲ್ಲಿ ರಚಿಸಿದ್ದಾರೆ. ಇದನ್ನು ಸಂಸ್ಕೃತಭಾಷೆಗೆ ಶ್ರೀ ಕಾವ್ಯ ಕಂಠ ಗಣಪತಿಮುನಿಗಳು ಅನುವಾದಿಸಿದ ಗ್ರಂಥವೇ, ಸದ್ದರ್ಶನ

ಈ ಕನ್ನಡಾನುವಾದಕ್ಕೆ ಬಹು ಸಹಾಯಕವಾಗಿ ಒದಗಿದ್ದು, "ಉನ್ನದಿ ನಲುಬದಿ"ಎಂಬ ಸದ್ದರ್ಶನದ ತೆಲುಗು ರೂಪ. ರಮಣ ಮಹರ್ಷಿಗಳು ಸರಳ ಸಂಕ್ಷಿಪ್ತವಾಗಿ ಸ್ವತಃ ರಚಿಸಿರುವ ವ್ಯಾಖ್ಯಾನ, ಸದ್ದರ್ಶನ ವ್ಯಾಖ್ಯಾನಗಳಲ್ಲಿ, ಸುಲಭ-ಸುಂದರ ಎಂಬುದರಲ್ಲಿ ಸಂಶಯವಿಲ್ಲ. ಸ್ವಯಂ ಭಗವಾನರೇ, ಯೋಗಿ ಶ್ರೀರಾಮಯ್ಯನವರ ಕೋರಿಕೆಯಂತೆ, ತೆಲುಗಿನಲ್ಲಿ ರಚಿಸಿದ್ದನ್ನೇ ಇಲ್ಲಿ ಯಥಾವತ್ತಾಗಿ ಕನ್ನಡಕ್ಕೆ ಅನುವಾದಿಸಿದ್ದಾಗಿದೆ.

ಇದು, ಮಹರ್ಷಿಗಳ ಬೋಧೆಯನ್ನು ಮತ್ತೆ ಮತ್ತೆ ಮನಸ್ಸಿಗೆ ತಂದುಕೊಳ್ಳುವಾಗ ಮೂಡಿಬಂದದ್ದು. ಅಷ್ಟಲ್ಲದೆ, ಈ ಗಹನ ತತ್ತ್ವವನ್ನು ವ್ಯಾಖ್ಯಾನಿಸುವ ಪಾಂಡಿತ್ಯ – ಜ್ಞಾನ, ನನಗೆ ಮೀರಿದ್ದು ಎಂಬ ಪೂರ್ಣ ಅರಿವಿದೆ.

ಸದ್ದರ್ಶನದ ಕನ್ನಡ ಪದ್ಯಗಳನ್ನು, ಓದಿ, ತಿದ್ದಿ, ಮೂಲದ ಅರ್ಥಾನುಸಂಧಾನಕ್ಕೆ, ಅಡ್ಡಿಯಾದ ಪದ್ಯದ ಸಾಲುಗಳನ್ನು, ತಾವೇ ಬದಲಿಸಿ, ಆಶೀರ್ವದಿಸಿದ, ಅಹೇತುಕ ದಯಾಸಿಂಧು, ಆತ್ಮಗುರುಗಳಿಗೆ, ನನ್ನ ಪಾದಾಭಿವಂದನೆ.

ಜ್ಞಾನಯಜ್ಞಗಳಲ್ಲಿ ರಮಣ ಸದ್ದರ್ಶನಕೆ
ಸ್ವಾನುಭವ ದರ್ಶನವ ಬಿಂಬಿಸಿದ ಗುರು ಬ್ರ–
ಹ್ಮಾನಂದ ವಚನ ರುಚಿ ಮನ ಬುದ್ಧಿಗಳ ಹೊಕ್ಕು
"ನಾನಾರು" ಚಿಂತನೆಗೆ ಹಚ್ಚಿದುದೆ ಸ್ಫೂರ್ತಿ.

ಸತ್ ಪ್ರತ್ಯಯಾಃ ಕಿಂ ನು ವಿಹಾಯ ಸಂತಂ?
ಹೃದ್ಯೇಷ ಚಿಂತಾರಹಿತೋ ಹೃದಾಖ್ಯಃ
ಕಥಂ ಸ್ಮರಾಮಸ್ತಮಮೇಯಮೇಕಂ?
ತಸ್ಯ ಸ್ಮೃತಿಸ್ತತ್ರ ದೃಢೈವ ನಿಷ್ಠಾ

ಇರಲು ಆ ಒಂದು, ಹೃದಯದೊಳೆಂದು ಸ್ಥಿರವಾಗಿ
ಸ್ಮರಣೆಗಾಸ್ಪದವೆಲ್ಲಿ? ಹೃದಯ ಕುಹರದೊಳು
ಪರಮಾತ್ಮನಿರಲು, ಹೃದಯದೊಳೆಂತು ಚಿಂತಿಪುದು?
ಸ್ಥಿರವಾಗಿ ಹೃದಯದಲಿ ನೆಲಸುವುದೆ ಸ್ಮರಣೆ

ಇರುವುದು ಒಂದು. ಅಂದರೆ ಜ್ಞಾನರೂಪಮಯವಾದ ವಸ್ತು. ಎಲ್ಲೆಡೆಯೂ ಇರುವ ಆ ವಸ್ತು, ತಾನಿಲ್ಲದೆ, ಇದ್ದಂತೆ ತೋರುವ ಜ್ಞಾನ ವಿರಲುಸಾಧ್ಯವೇ? ಆ ಸದ್ವಸ್ತು, ಚಿಂತಿಸಬೇಕಾದ ಅಗತ್ಯವೇ ಇಲ್ಲದೆ, ಚಿಂತನೆಗೆ ಮೂಲವಾದ ಹೃದಯದಲ್ಲೇ ಇರುವಾಗ, 'ಹೃದಯ' ಎಂಬ ಹೆಸರುಳ್ಳ ಆ ಸದ್ವಸ್ತುವನ್ನು ಸ್ಮರಿಸುವುದು ಹೇಗೆ? ಅದು ಇರುವ ಹಾಗೆ ಹೃದಯದಲ್ಲಿ ನಾವು ಸ್ಥಿರವಾಗಿ ನಿಲ್ಲುವುದೇ ನಿಜವಾದ ಸ್ಮರಣೆ.

Unless Reality exists, can thought of it arise? Since, devoid of thought, Reality exists within as Heart, how to know the Reality we term the Heart? To know That is merely to be That in the Heart

ಮೃತ್ಯುಂಜಯಂ ಮೃತ್ಯುಭಿಯಾಶ್ರಿತಾನಾ-

ಮಹಂ ಮತಿರ್ಮೃತ್ಯುಮುಪೈತಿ ಪೂರ್ವಂ

ಅಥಃ ಸ್ವಭಾವಾದಮೃತೇಷು ತೇಷು

ಕಥಂ ಪುನರ್ಮೃತ್ಯುಧಿಯೋವಕಾಶಃ

ಮರಣ ಭೀತರು ಮರಣರಹಿತನಾ ಶಂಕರನ

ಚರಣಾಶ್ರಿತರು 'ಅಹಂ ಮತಿ' ಯೆದ್ದು ನಶಿಸೆ

ಮರಣಿಸಲು 'ನಾನೆಂಬ' ಭಾವ, ಮೃತ್ಯುಂಜಯರು

ಮರಳಿ ಸಾವಿನ ಭಯದ ಬಲೆಗೆ ಸಿಲುಕುವರೆ?

ಸಾವಿನ ಭಯದಿಂದ ಹೆದರುವವರು, ಭವ ಮರಣ ರಹಿತನಾದ ಮೃತ್ಯುಂಜಯನ ಚರಣಗಳನ್ನು ಆಶ್ರಯಿಸುತ್ತಾರೆ. ಸತ್ಯವನ್ನರಿತು, 'ಅಹಂ ಮತಿ' ಸತ್ತ ನಂತರ, ಅಮೃತಸ್ವರೂಪರಾಗಿ ಬೆಳಗುವವವರನ್ನು ಸಾವಿನ ಚಿಂತೆ ಕಾಡುತ್ತದೆಯೇ?

When those who are in dread of death seek refuge at the feet of the deathless, birthless Lord Supreme, their ego and attachments die; and they, now deathless, think no more of death.

(೧)

ಸರ್ವೈರ್ನಿದಾನಂ ಜಗತೋಽಹಮಶ್ಚ
ವಾಚ್ಯಃ ಪ್ರಭುಃ ಕಶ್ಚಿದಪಾರಶಕ್ತಿಃ
ಚಿತ್ರೇತ್ರ ಲೊಕ್ಯಂ ಚ ವಿಲೋಕಿತಾ ಚ
ಪಟಃ ಪ್ರಕಾಶೋ ಪ್ಯಭವತ್ಸ ಏಕಃ

ನಾವು ಮತ್ತೀಜಗವು ಗೋಚರಿಸುತಿರಲಾಗಿ
ಸರ್ವಕಾರಣ ಕರ್ತೃವೊಬ್ಬನೇ ತಿಳಿಯೆ
ವೈವಿಧ್ಯ ಚಿತ್ರಗಳು, ನೋಟಕರು, ತೆರೆ, ಬೆಳಕು
ಸರ್ವವೂ ತಾನಾದ ಸದ್ವಸ್ತುವೊಂದೇ

ನಮಗೆ ಜಗತ್ತು ಇರುವಂತೆ ಕಾಣುತ್ತಿದೆ. ಆದ್ದರಿಂದ ಈ ಜಗತ್ತಿಗೆ, ಬಹುವಿಧಶಕ್ತಿಗಳಿರುವ ಒಬ್ಬ ಕಾರಣಕರ್ತ ಅಥವಾ ಶಕ್ತಿಯೊಂದು ಇದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಸತ್ಯ ಸಂಗತಿಯೆಂದರೆ, ನಮಗೆ ಕಾಣುತ್ತಿರುವ ಈ ಬೇರೆ ಬೇರೆ ಹೆಸರು, ರೂಪಗಳು, ನೋಡುತ್ತಿರುವ ನಾವು, ಚಿತ್ರಪಟ, ಕಾಣುವ ತೆರೆ, ಅದನ್ನು ಬೆಳಗಿಸುವ ಬೆಳಕು, ಇವೆಲ್ಲವೂ ಅವನೇ.

Since we know the world, we must concede for both
a common Source, single but with the power of seeming
many. The picture of names and forms, the onlooker, the
screen, the light that illumines -- all these are verily He.

(೨)

ಆರಭ್ಯತೇ ಜೀವಜಗತ್ಪರಾತ್ಮ–
ತತ್ವಾಭಿಧಾನೇನ ಮತಂ ಸಮಸ್ತಂ
ಇದಂ ತ್ರಯಂ ಯಾವದಹಂ ಮತಿಃ ಸ್ಯಾತ್
ಸರ್ವೋತ್ತಮಾಹಂ ಮತಿಶೂನ್ಯನಿಷ್ಠಾ

ಜೀವ, ಜಗ, ಶಿವ ಯೆಂಬ ಮೂರು ಯೆಲ್ಲಾ ಮತದ
ಭಾವ ಮೂಲವು; ತತ್ವವೊಂದು ಮೂರಾಗಿ
ಆವರಿಸಿದ'ಹಮಿಂದ' ತೋರುವುದು, ಲಯಿಸಲಾ
ಭಾವವೇ ಶ್ರೇಷ್ಠ ತನ್ನಲ್ಲಿ ತಾನಾಗಿ

ಜೀವ, ಜಗತ್ತು ಮತ್ತು ಈಶ್ವರ – ಈ ಮೂರನ್ನು ಆಧರಿಸಿಯೇ ಎಲ್ಲಾ ಮತಗಳ, ತತ್ವ ಜಿಜ್ಞಾಸೆಗಳ ಆರಂಭ. ಈ ಮೂರೂ ಒಂದೇ, ಬೇರೆಬೇರೆಯಲ್ಲ ಎನ್ನುವುದು ಸತ್ಯ. ಒಂದು ವಸ್ತುವೇ ಮೂರಾಗಿ ಕಾಣುವುದು 'ನಾನು' (ಅಹಂಕಾರ) ಇರುವವರೆಗೆ. ಆ "ನಾನು" ಸತ್ತು, ತಾನು ಸಹಜ ಸ್ಥಿತಿಯಲ್ಲಿರುವುದೇ ಸರ್ವೋತ್ತಮ.

On three entities -- the individual, God and the world -- every creed is based. That `the One becomes the three' and that `always the three are three', are said only while the ego lasts. To lose the `I' and in the Self to stay is the State Supreme.

(೩)

ಸತ್ಯಂ ಮೃಷಾ ವಾ ಚಿದಿದಂ ಜಡಂ ವಾ
ದುಃಖಂ ಸುಖಂ ವೇತಿ ಮುಧಾ ವಿವಾದಃ
ಅದೃಷ್ಟಲೋಕಾ ನಿರಹಂ ಪ್ರತೀತಿ–
ರ್ನಿಷ್ಠಾವಿಕಲ್ಪಾ ಪರಮಾಖಿಲೇಷ್ಟಾ

ಈ ಭುವನ ನಿಜ–ಸುಳ್ಳೊ? ಸುಖ, ದುಃಖ,ಜ್ಞಾನವೋ?
ಲಾಭವೇ ಜಿಜ್ಞಾಸೆ? ತೊರೆ ವ್ಯರ್ಥ ವಾದ
ಆ ಭಾವನೆಯ ಹರಿಸಿ ನಾನೆಂಬುದನು ತೊರೆದ
ನಿರ್ಭಾವ ಸ್ಥಿತಿ ಮೇಲು ಸರ್ವಸಂಪ್ರಿಯವು

ಈ ಜಗತ್ತು ಸತ್ಯವೇ? (ತೆರೆಯಮೇಲೆ ಕಾಣುವ ಚಲನಚಿತ್ರ ದೃಶ್ಯಗಳಂತೆ) ಮಿಥ್ಯವೇ? ಈ ತೋರುತ್ತಿರುವ ಲೋಕ, ಜ್ಞಾನರೂಪವೋ? ಅಲ್ಲವೋ? ಜಗತ್ತು, ಸುಖವೋ? ದುಃಖವೋ? ಎಂಬ ವಾದವಿವಾದಗಳಿಂದ ಫಲವೇನು? ಈ ಜಗದ್ದೃಷ್ಟಿ ತೊಲಗಿ, ತನ್ನನ್ನು ತಾನು ತಿಳಿದು, ಒಂದು ಎರಡು ಎಂಬುದನ್ನು ಬಿಟ್ಟ 'ನಾನು' ಇರದ ಸ್ಥಿತಿಯೇ ಸರ್ವಸಮ್ಮತ.

The World is true'; `No, it is a false appearance'; `The World is Mind'; `No, it is not'; `The World is pleasant'; `No, it is not' -- What avails such talk? To leave the world alone and know the Self, to go beyond all thought of `One' and `Two', this egoless condition is the common goal of all.

(೪)

ಸರೂಪ ಬುದ್ಧಿರ್ಜಗತೀಶ್ವರೇ ಚ
ಸರೂಪಧೀರಾತ್ಮನಿ ಯಾವದಸ್ತಿ
ಅರೂಪ ಆತ್ಮಾ ಯದಿ ಕಃ ಪ್ರಪಶ್ಯೇತ್
ಸಾ ದೃಷ್ಟಿರೇಕಾನವಧಿರ್ಹಿ ಪೂರ್ಣಾ

ರೂಪತಾನೆಂಬ ಭ್ರಮೆಯಿರಲಾಗಿ 'ಸಾಕಾರ'
ರೂಪ ತೋರ್ಕೆಗಳು ಈಶ್ವರ ಜಗವು ಸಕಲ;
ರೂಪತಾನಿಲ್ಲದಿರೆ ನೋಡುವನದಾರು? ಚಿ–
ದ್ರೂಪ ಸ್ವರೂಪ ತಾನ್ ಎಂಬರಿವೆ ಪೂರ್ಣ

'ನಾನು' ಈ ದೇಹ ಎಂದು ತಿಳಿದಲ್ಲಿ , ನಾವು ರಾಮ, ಶಿವ ಇತ್ಯಾದಿ ರೂಪಗಳಲ್ಲಿ ದೇವರನ್ನು ಕಾಣುವೆವು. ತಾನು ದೇಹವಲ್ಲ ಎಂದಾಗ ಆ ರೂಪಗಳನ್ನು ಯಾರು ಹೇಗೆ ನೋಡಲು ಸಾಧ್ಯ? ಕಣ್ಣಿಲ್ಲದೆ ನೋಡಲು ಸಾಧ್ಯವೇ? ಆ ಕಣ್ಣೇ ತಾನು, ತುದಿ ಮೊದಲಿಲ್ಲದ ಕಣ್ಣು.

If Self has form, the world and God likewise have form. If Self is without form, by whom and how can form(of world and God) be seen? Without the eye, can there be sight or spectacle? The Self, the real Eye, is infinite.

(೫)

ಯತ್ ಪಂಚಕೋಶಾತ್ಮಕಮಸ್ತಿ ದೇಹಂ
ತದಂತರಾ ಕಿಂ ಭುವನಂ ಚಕಾಸ್ತಿ
ದೇಹಂ ವಿನಾ ಪಂಚವಿಧಂ ತದೇತತ್
ಪಶ್ಯಂತಿ ಕೇ ವಾ ಭುವನಂ ಭಣಂತು

ದೇಹವಿದು ಪಂಚಕೋಶಾತ್ಮಕವು, ಕೋಶಗಳು
'ದೇಹ'ಎಂಬುವ ಪದದೊಳಡಗಿರುವ 'ಐದು'
ದೇಹವೆಂಬುದು ನಾಸ್ತಿಯೆನೆ ಪ್ರಪಂಚವದೆಲ್ಲಿ?
ದೇಹವಿಲ್ಲದೆ ಜಗವನಾರು ಕಂಡವರು?

ಪಂಚಕೋಶಗಳ ಕೂಟವೇ ದೇಹ. ಹೀಗಿರುವಾಗ 'ದೇಹ'ಎಂಬ ಪದದಲ್ಲಿ ಈ ಐದು ಕೋಶಗಳೂ ಅಡಗಿವೆ.

ದೇಹವಿಲ್ಲದೆ ಲೋಕ ವುಂಟೆ? ದೇಹವಿಲ್ಲದೆ ಲೋಕವನ್ನು ಕಂಡವರುಂಟೆ?

The body is made up of the five sheaths; in the term body all the five are included. Without the body the world is not. Has one without the body ever seen the world?

(೬)

ಶಬ್ದಾದಿರೂಪಂ ಭುವನಂ ಸಮಸ್ತಂ
ಶಬ್ದಾದಿಸತ್ತೇಂದ್ರಿಯವೃತ್ತಿಭಾಸ್ಯಾ
ಸತ್ತೇಂದ್ರಿಯಾಣಾಂ ಮನಸೋ ವಶೇ ಸ್ಯಾತ್
ಮನೋಮಯಂ ತದ್ಭುವನಂ ವದಾಮಃ

ಪಂಚವಿಷಯಕ ರೂಪ ಸಕಲ ಜಗವೆಲ್ಲವೂ
ಪಂಚೇಂದ್ರಿಯಂಗಳಿಗೆ ಪ್ರಕಟವಾಗುವವು
ಪಂಚೇಂದ್ರಿಯಾಧಾರ ಮನ ಜಗವನರಿಯೆ, ಪ್ರ
ಪಂಚವೇ 'ಮನ', ಜಗ, ಮನೋಮಯವೆನುವೆವು

ಲೋಕವೆಲ್ಲಾ – ಪಂಚವಿಷಯಾತ್ಮಕ, ಬೇರೆಯಲ್ಲ. ಶಬ್ದ–ಸ್ಪರ್ಶ–ರೂಪ–ರಸ–ಗಂಧ ಗಳೆಂಬ ಪಂಚವಿಷಯಗಳು ಗೋಚರವಾಗುವುದು ಪಂಚೇಂದ್ರಿಯಗಳಿಗೆ. ಆ ಪಂಚೇಂದ್ರಿಯಗಳ ಮೂಲಕ ಮನಸ್ಸು ಲೋಕವನ್ನು ತಿಳಿಯಲು ಕಾರಣವಾದ್ದರಿಂದ, ಲೋಕವು ಮನಸ್ಸೇ ಆಗಿದೆ. ಮನಸ್ಸೆಂಬುದೇ ಇಲ್ಲದೆ ಲೋಕವುಂಟೆ?

The world is made up of the five kinds of sense perceptions and nothing else. And those perceptions are felt as objects by the five senses. Since through the senses the mind alone perceives the world, is the world other than the mind?

(೭)

ಧಿಯಾ ಸಹೋದೇತಿ ಧಿಯಾಸ್ತಮೇತಿ
ಲೋಕಸ್ತತೋ ಧೀಪ್ರವಿಭಾಸ್ಯ ಏಷಃ
ಧೀಲೋಕಜನ್ಮಕ್ಷಯಧಾಮ ಪೂರ್ಣಂ
ಸದ್ವಸ್ತು ಜನ್ಮಕ್ಷಯಶೂನ್ಯಮೇಕಮ್

ಲೋಕ–ಮನ ಜೊತೆಜನಿಸಿ ಕೂಡಿ ಲಯವಾದರೂ
'ಲೋಕ'ಗೋಚರವಾಗುವುದು ಬುದ್ಧಿಯಿಂದ
ಲೋಕ ಬುದ್ಧಿಗಳೆರಡು ಸುಳಿದಳಿವ ಸದ್ವಸ್ತು
ವೈಕಾರ್ಯ ಜನ್ಮ ಕ್ಷಯಗಳಿರದ ಏಕ

ಲೋಕ ಮತ್ತು ಜ್ಞಾನ ಇವೆರಡೂ ಜೊತೆಯಲ್ಲೇ ಹುಟ್ಟಿ, ಜೊತೆಯಲ್ಲಿಯೇ ನಾಶವಾದರೂ, ಲೋಕ ಗೋಚರವಾಗುವುದು ಜ್ಞಾನದಿಂದಲೇ. ಲೋಕ– ಜ್ಞಾನ ಇವೆರಡೂ ಹುಟ್ಟಿ, ನಾಶವಾಗುವ ಸ್ಥಾನ; ಭವಲಯಗಳಿಲ್ಲದೆ ಬೆಳಗುವ ಪರಿಪೂರ್ಣವಾದ ಸದ್ವಸ್ತು.

Though the world and mind rise and fade together, the world shines by the light of the mind. The ground whence the world and mind arise, and wherein they set, that Perfection rises not nor sets but ever shines. That is Reality.

(೮)

ಭವಂತು ಸದ್ದರ್ಶನಸಾಧನಾನಿ
ಪರಸ್ಯ ನಾಮಾಕೃತಿಭಿಃ ಸಪರ್ಯಾಃ
ಸದ್ವಸ್ತುನಿ ಪ್ರಾಪ್ತತದಾತ್ಮಭಾವಾ
ನಿಷ್ಠೈವ ಸದ್ದರ್ಶನಮಿತ್ಯವೇಹಿ

ನಾಮ ರೂಪ ವಿಭಿನ್ನ ಪೂಜೆ ಸಾಧನಗಳಾ
ಬ್ರಹ್ಮ ಪರಿಪೂರ್ಣ ದರ್ಶನಕೆ ಪಥ ನಿತ್ಯ
ನಾಮ ರೂಪಗಳಿರದ ಬ್ರಹ್ಮತತ್ವದಿ ತನ್ನ
ಧಾಮವೆನ್ನುವ ನಿಷ್ಠೆ ಸದ್ದರ್ಶನ

ಯಾವಹೆಸರಿನಿಂದಾಗಲೀ, ಯಾವರೂಪದಲ್ಲಿಯಾಗಲೀ, ಯಾರು ಭಜಿಸಿದರೂ, ಆ ಭಜನೆ ಅಥವಾ ಪೂಜೆ ನಾಮರೂಪರಹಿತವಾದ, ಪರಿಪೂರ್ಣವಸ್ತುವಿನ ದರ್ಶನಕ್ಕೆ ದಾರಿಯಾಗಬೇಕು. ಆಗಮಾತ್ರ ಆ ಸದ್ವಸ್ತು–ತತ್ವದಲ್ಲಿ ತನ್ನ ಯಥಾರ್ಥವನ್ನು ತಿಳಿದು, ಶಾಂತಿ ಹೊಂದಿ, ಸತ್ಯದರ್ಶನದಲ್ಲಿ ತನ್ಮಯನಾಗುವುದು ಸಾಧ್ಯ.

Under whatever name or form we worship It, It leads us on to knowledge of the nameless, formless Absolute. Yet, to see one's true Self in the Absolute, to subside into It and be one with It, this is the true Knowledge of the Truth.

(೯)

ದ್ವಂದ್ವಾನಿ ಸರ್ವಾಣ್ಯಖಿಲಾಸ್ತ್ರಿಪುಟ್ಯಃ
ಕಿಂಚಿತ್ ಸಮಾಶ್ರಿತ್ಯ ವಿಭಾಂತಿ ವಸ್ತುಃ
ತನ್ಮಾರ್ಗಣೇ ಸ್ಯಾತ್ ಗಲಿತಂ ಸಮಸ್ತಂ
ನ ಪಶ್ಯತಾಂ ಸಚ್ಚಲನಂ ಕದಾಪಿ

ದ್ವಂದ್ವ ತ್ರಿಪುಟಿಗಳೆಲ್ಲ ವೊಂದನಾಶ್ರಯಿಸ ದೇ
ನೆಂದು ಮನ ಶೋಧಿಸಲು ಎಲ್ಲವೂ ಕರಗಿ
ಸ್ಪಂದಿಸಲು ಮನ ಏಕಚಿತ್ತದಿಂ ಬ್ರಹ್ಮವನು
ಹೊಂದಿ ಸ್ಥಿರವಾಗುವರು ಸತ್ ತತ್ವವಿದರು

ದ್ವಂದ್ವಗಳು, ತ್ರಿಪುಟಿಗಳು ಇವು ನಿರಂತರವಾಗಿ 'ಒಂದನ್ನು' ಆಶ್ರಯಿಸಿವೆ. ಅದು ಯಾವುದೆಂದು ಒಳಹೊಕ್ಕು ನೋಡಲು ಅವು ಮರೆಯಾಗುವವು. ಹಾಗೆ ತತ್ವವನ್ನು ದರ್ಶಿಸಿದವರೇ ನಿಶ್ಚಿಂತರು.

`Twos' and `threes' depend upon one thing, the ego. If one asks in one's Heart, `What is this ego?' and finds it, they slip away. Only those who have found this know the Truth, and they will never be perplexed

(೧೦)

ವಿದ್ಯಾ ಕಥಂ ಭಾತಿ ನ ಚೇದವಿದ್ಯಾ
ವಿದ್ಯಾ ವಿನಾ ಕಿಂ ಪ್ರವಿಭಾತ್ಯವಿದ್ಯಾ
ದ್ವಯಂ ಸ ಕಸ್ಯೇತಿ ವಿಚಾರ್ಯ ಮೂಲ
ಸ್ವರೂಪನಿಷ್ಠಾ ಪರಮಾರ್ಥವಿದ್ಯಾ

ವಿದ್ಯೆಯು ಅವಿದ್ಯೆಯೂ ಒಂದಬಿಟ್ಟೊಂದಿಲ್ಲ
ವಿದ್ಯಾ ಅವಿದ್ಯೆಗಳು ಯಾರಿಗೆಂದರಿತು
ಆ 'ದ್ವಯ'ದ ಮೂಲ ಆತ್ಮವಿಚಾರದಿಂ ತಿಳಿಯೆ
ಅದ್ವಯ ಜ್ಞಾನವದು ಪರಮಾರ್ಥ ವಿದ್ಯೆ

ಅಜ್ಞಾನವಿಲ್ಲದೆ ಜ್ಞಾನವಿಲ್ಲ; ಜ್ಞಾನವಿಲ್ಲದೆ ಅಜ್ಞಾನವಿಲ್ಲ. ಆ ಜ್ಞಾನಾಜ್ಞಾನಗಳು ಯಾರಿಗೆ ಎಂಬ ಮೂಲತಿಳಿದ ಅರಿವೇ ಜ್ಞಾನವೆನಿಸುವುದು.

There is no knowledge without ignorance; and without knowledge ignorance cannot be. To ask, `Whose is this knowledge? Whose this ignorance?' and thus to know the primal Self, this alone is Knowledge.

(೧೧)

ಬೋದ್ಧಾರಮಾತ್ಮಾನಮಜಾನತೋ ಯೋ
ಬೋಧಃ ಸ ಕಿಂ ಸ್ಯಾತ್ ಪರಮಾರ್ಥ ಬೋಧಃ
ಬೋಧಸ್ಯ ಬೊಧ್ಯಸ್ಯ ಚ ಸಂಶ್ರಯಂ ಸ್ವಂ
ವಿಜಾನತಸ್ತದ್ ದ್ವಿತಯಂ ವಿನಶ್ಯೇತ್

ತಾನಾರು ತಿಳಿಯದಲೆ ಎಲ್ಲವನು ತಿಳಿದಿರುವ
ಜ್ಞಾನ ವಜ್ಞಾನ, ನಿಜ ಜ್ಞಾತೃ ಪರತತ್ವ
ಜ್ಞಾನ ಜ್ಞೇಯಂಗಳಿಗದಾಧಾರ ವೆಂದರಿತ
ಜ್ಞಾನಿ, 'ಜ್ಞಾನಾಜ್ಞಾನ' ದ್ವಂದ್ವ ಕಳೆವ

ತಿಳಿಯಬೇಕಾದ ತನ್ನನ್ನು ತಿಳಿಯದೆ, ಬೇರೆ ಎಲ್ಲವನ್ನೂ ತಿಳಿದಿರುವುದು, ಅಜ್ಞಾನವೇ ಹೊರತು ಜ್ಞಾನವಲ್ಲ. ಜ್ಞಾನ, ಸಕಲಕ್ಕೂ ಆಧಾರವಾದ ತನ್ನನ್ನು ತಿಳಿದುಕೊಂಡಲ್ಲಿ, ಜ್ಞಾನಾಜ್ಞಾನಗಳು ನಶಿಸುವವು.

Without knowing the Self that knows, to know all objects is not knowledge; it is only ignorance. Self, the ground of knowledge and the non-Self, being known, both knowledge and ignorance fall away.

(೧೨)

ನಿದ್ರಾ ನ ವಿದ್ಯಾ ಗ್ರಹಣಂ ನ ವಿದ್ಯಾ
ಗೃಹ್ಣಾತಿ ಕಿಂಚಿನ್ನ ಯಥಾರ್ಥಬೋಧೇ
ನಿದ್ರಾಪದಾರ್ಥಃ ಗ್ರಹಣೇತರಾ ಸ್ಯಾತ್
ಚಿದೇವ ವಿದ್ಯಾ ವಿಲಸಂತ್ಯಶೂನ್ಯಾ

'ತಿಳಿವು' 'ತಿಳಿವಿಲ್ಲದಿರುವಿಕೆ' ಗನ್ಯವೇ ಜ್ಞಾನ
ತಿಳಿಯುವಿಕೆ ತಿಳಿವು ಮೂಡಿಸುವಿಕೆಗು ಅನ್ಯ
ಬೆಳಗುವುದು ತಾನಾಗಿ ಚಿದ್ರೂಪಿನಿಂ ಜ್ಞಾನ
ತಿಳಿವದೇ ಸದ್ವಸ್ತುವದು ಶೂನ್ಯವಲ್ಲ

ಜ್ಞಾನಾಜ್ಞಾನಗಳು ಇಲ್ಲದಿರುದೇ ಜ್ಞಾನವೆನಿಸುವುದು. ತಿಳಿಯುವುದು ಜ್ಞಾನವಲ್ಲ. ತಿಳಿಯುವುದಕ್ಕೂ, ತಿಳಿಸಲ್ಪಡುವುದಕ್ಕೂ ಬೇರೆಯಾಗಿ ತಾನು ಬೆಳಗುತ್ತಿವುದರಿಂದಲೇ ಜ್ಞಾನವುಂಟಾಗುವುದು. ಆದು ಶೂನ್ಯವಲ್ಲ.

True Knowledge is being devoid of knowledge as well as ignorance of objects. Knowledge of objects is not true knowledge. Since the Self shines self-luminous, with nothing else for It to know, with nothing else to know It, the Self is Knowledge. Nescience It is not.

(೧೩)

ಸತ್ಯಶ್ಚಿದಾತ್ಮಾ ವಿವಿಧಾಕೃತಿಶ್ಚಿತ್
ಸಿಧ್ಯೇತ್ ಪೃಥಕ್ ಸತ್ಯಚಿತೋ ನ ಭಿನ್ನಾ
ಭೂಷಾವಿಕಾರಾಃ ಕಿಮು ಸಂತಿ ಸತ್ಯಂ
ವಿನಾ ಸುವರ್ಣಂ ಪೃಥಗತ್ರ ಲೋಕೇ

ಜ್ಞಾನ ನಾನೆಂಬುದೇ ನಿತ್ಯ, ನಾನಾಕಾರ
ಜ್ಞಾನ ವಜ್ಞಾನ, ಬೇರಲ್ಲ ತನ್ನಿಂದ
ಭಿನ್ನ ರೂಪದ ಚಿನ್ನದೊಡವೆಗಳು ಮೂಲದಾ
ಚಿನ್ನವಲ್ಲದೆ ಚಿನ್ನದಿಂದನ್ಯವೇ?

ಜ್ಞಾನಸ್ವರೂಪವಾದ ತಾನೇ ಸತ್ಯ. ನಾನಾಕಾರ ಜ್ಞಾನ ಅಜ್ಞಾನ. ಅಸತ್ಯವಾದ ಆ ಜ್ಞಾನವೂ ಸತ್ಯಜ್ಞಾನವಾದ ತನಗಿಂತ ಬೇರೆಯಲ್ಲ. ಹಲವು ವಿನ್ಯಾಸಗಳ ಒಡವೆಗಳು, ನಮಗೆ ತೋರ್ಬಡುವಂತೆ ಸತ್ಯವಲ್ಲ. ಅವಕ್ಕೆ ಮೂಲಸತ್ಯವಾದ ಬಂಗಾರ ಎಂಬುದಿಲ್ಲದೆ, ಒಡವೆಗಳಿರಲು ಸಾಧ್ಯವೇ?

The Self that is Awareness, that alone is true. The knowledge which is various is ignorance. And even ignorance, which is false, cannot exist apart from the Self. False are the many jewels, for apart from gold, which alone is true, they cannot exist.

(೧೪)

ತದ್ ಯುಷ್ಮದೋರಸ್ಮದಿ ಸಂಪ್ರತಿಷ್ಠಾ
ತಸ್ಮಿನ್ ವಿನಷ್ಟೇಸ್ಮದಿ ಮೂಲಬೋಧಾತ್
ತದ್ಯುಷ್ಮದಸ್ಮನ್ಮತಿವರ್ಜಿತೈಕಾ
ಸ್ಥಿತಿಃ ಜ್ವಲಂತೀ ಸಹಜಾತ್ಮನಃ ಸ್ಯಾತ್

'ನಾನು'ಉತ್ತಮಪುರುಷ ಸ್ಥಿತಿಯಿಂದ 'ನೀನ್' 'ಅವನು'
ನಾನಿರದೆ ಮಧ್ಯಮ–ಪ್ರಥಮಪುರುಷವೆಲ್ಲಿ?
ನಾನೆಂಬ ತತ್ವ ತಿಳಿದೊಡನೆ 'ನಾ' ಲಯವಾಗಿ
ತಾನೆ ಬೆಳಗುವುದಾತ್ಮ ಸಹಜಸ್ಥಿತಿಯಿಂದ

"ನಾನು"ಎಂಬ ಉತ್ತಮಪುರುಷ ಇರುವುದಾದರೆ, ""ನೀನು" ಅವನು" ಎಂಬ ಮಧ್ಯಮಪುರುಷಗಳೂ ಇರುತ್ತವೆ. ಉತ್ತಮಪುರುಷ–ತತ್ವವನ್ನು ತಿಳಿಯುವುದರ ಮೂಲಕ "ನಾನು" ಇಲ್ಲವಾಗಿ, ಕ್ರಮೇಣ ಅದೂಇಲ್ಲದೆ, ಏಕವಾಗಿ ಬೆಳಗುವುದೇ ತನ್ನ ನಿಜಸ್ಥಿತಿಯಾಗಿರುತ್ತದೆ.

`You' and `he' -- these appear only when `I' does.
But when the nature of the `I' is sought and the ego is destroyed, `you' and `he' are at an end. What shines then as the One alone is the true Self.

(೧೫)

ಭೂತಂ ಭವಿಷ್ಯಚ್ಚ ಭವತ್ ಸ್ವಕಾಲೇ
ತದ್ವರ್ತಮಾನಸ್ಯ ವಿಹಾಯ ತತ್ವಮ್
ಹಾಸ್ಯಾ ನ ಕಿಂ ಸ್ಯಾದ್ಗತಭಾವಿಚರ್ಚಾ
ವಿನೈಕಸಂಖ್ಯಾಂ ಗಣನೇವ ಲೋಕೇ

ವರ್ತಮಾನವೆ ಮೂಲ ಭೂತ ಭವಿತವ್ಯಕ್ಕೆ
'ವರ್ತಮಾನವೆ' ಎಲ್ಲ 'ತನ್ನ' ಕಾಲದಲಿ
ವರ್ತಮಾನದ ತತ್ವ ವಿದಬಿಟ್ಟು ಮಿಕ್ಕೆರಡ
ನರ್ಥೈಸುವಿಕೆ, ಸಂಖ್ಯೆ 'ಒಂದ'ನುಳಿದೆಣಿಕೆ

ವರ್ತಮಾನಕಾಲವನ್ನು ಆಧರಿಸಿಯೇ ಭೂತ ಭವಿಷ್ಯತ್ಕಾಲಗಳು. ಇವೂಸಹ ತಮ್ಮ ತಮ್ಮ ಕಾಲಗಳಲ್ಲಿ ವರ್ತಮಾನವೇ ಆಗಿರುತ್ತವೆ. ಆದ್ದರಿಂದ ವರ್ತಮಾನವೊಂದೇ ಇರುವುದು. ಈ ವರ್ತಮಾನದ ತತ್ವವನ್ನು ತಿಳಿಯದೆ, ಭೂತ ಭವಿಷ್ಯತ್ಕಾಲಗಳನ್ನು ತಿಳಿಯಲು ಹೊರಡುವುದು, ಸಂಖ್ಯೆ ಒಂದನ್ನು ಬಿಟ್ಟು ಎಣಿಕೆ ಮಾಡಿದಂತೆ.

Past and future are dependent on the present. The past was present in its time and the future will be present too. Ever-present is the present. To seek to know the future and the past, without knowing the truth of time today, is to try to count without the number `One'.

(೧೬)

ಕ್ವ ಭಾತಿ ದಿಕ್ಕಾಲಕಥಾ ವಿನಾಸ್ಮಾನ್
ದಿಕ್ಕಾಲಲೀಲೇಹ ವಪುರ್ವಯಂ ಚೇತ್
ನ ಕ್ವಾಪಿ ಭಾವೋ ನ ಕದಾಪಿ ಭಾವೋ
ವಯಂ ತು ಸರ್ವತ್ರ ಸದಾ ಚ ಭಾಮಃ

ನಾವಿರದೆ ದೇಶಕಾಲಗಳುಂಟೆ? ದೇಹವೇ
‘ನಾವೆ’ನಲು ದೇಶಕಾಲಾನುವರ್ತಿಗಳು
ನಾವಿಂದು, ಹಿಂದೆ ಮುಂದೆಯು ಒಂದೆ ಸದ್ವಸ್ತು
ನಾವಿಲ್ಲಿ, ಅಲ್ಲಿ, ಸರ್ವತ್ರ ಕಾಲವ ಮೀರಿ

ನಾವು ಇಲ್ಲದೆ ಕಾಲವೆಲ್ಲಿ? ದೇಶವೆಲ್ಲಿ? ನಾವು ’ದೇಹ’ ಎಂದು ತಿಳಿದಲ್ಲಿ, ಕಾಲ ದೇಶಗಳ ಪರಿಧಿಗೆ ಒಳಪಟ್ಟಂತೆ ಆಗುತ್ತದೆ. ನಾವು ದೇಹವೇ? ನಾವು ಈಗಲೂ, ಆಗಲೂ, ಯಾವಾಗಲೂ ಇದ್ದೇವೆ. ಇಲ್ಲಿ, ಅಲ್ಲಿ, ಎಲ್ಲೆಲ್ಲೂ ಏಕವೇ. ಹಾಗಾಗಿ, ಕಾಲದೇಶಗಳಿರದ ಆ ’ನಾವು’ ಸತ್ಯ.

Without us there is no time nor space. If we are only bodies, we are caught up in time and space. But are we bodies? Now, then and always -- here, now and everywhere – we are the same. We exist, timeless and spaceless we.

(೧೭)

ದೇಹಾತ್ಮಭಾವೇ ಜ್ಞಜಡೌ ಸಮಾನಾ
ವೇಕಸ್ಯ ದೇಹೇ ಹೃದಿದೀಪ್ತ ಆತ್ಮಾ
ಆಕ್ರಮ್ಯ ದೇಹಂ ಚ ಜಗಚ್ಚ ಪೂರ್ಣಃ
ಪರಸ್ಯ ಮೇಯಂ ತನುಮಾತ್ರಮಾತ್ಮಾ

ನನ್ನನರಿಯದ ಮತ್ತು ಅರಿತವರ ಭಾವದಲಿ
ನಾನೊಂದು ದೇಹ, ಮಿಗೆ ದೇಹದೊಳತತ್ವ-
ವನ್ನರಿತ ಜ್ಞಾನಿಗದು, ಜಗವನೂ, ಎಲ್ಲವನು
ತನ್ನನೂ ಬೆಳಗುತಿಹ ಮೂಲ ಚೈತನ್ಯ

’ತನ್ನನ್ನು ’ತಿಳಿಯದವನಿಗೂ, ತನ್ನನ್ನು ತಿಳಿದವನಿಗೂ ದೇಹ ಎಂದರೆ ’ನಾನೇ’. ತಿಳಿಯದವನಿಗೆ ದೇಹ ಮಾತ್ರವೇ ’ನಾನು’. ತಿಳಿದವನಿಗೆ, ’ನಾನು’ ಸಕಲವೂ ಆದ ’ತಾನಾಗಿ’ತೋರುತ್ತದೆ.

To those who do not know the Self and to those who do, the body is the `I'. But to those who do not know the Self the `I' is bounded by the body; while to those who within the body know the Self the `I' shines boundless. Such is the difference between them.

(೧೮)

ಅಜ್ಞಸ್ಯ ವಿಜ್ಞಸ್ಯ ಚ ವಿಶ್ವಮಸ್ತಿ
ಪೂರ್ವಸ್ಯ ದೃಶ್ಯಂ ಜಗದೇವ ಸತ್ಯಮ್
ಪರಸ್ಯ ದೃಶ್ಯಾಶ್ರಯಭೂತಮೇಕಂ
ಸತ್ಯಂ ಪ್ರಪೂರ್ಣಂ ಪ್ರವಿಭಾತ್ಯರೂಪಂ

ಜ್ಞಾನಿಗೂ ಅಜ್ಞಾನಿಗೂ ಜಗವು ಸತ್ಯವೇ
ಜ್ಞಾನಹೀನನಿಗಂತು ಲೋಕವೇ ಸತ್ಯ!
ಜ್ಞಾನಿ ತಿಳಿವನು ಸತ್ಯವೆನೆ ಲೋಕದಾಧಾರ
ಜ್ಞಾನಿ–ಮೂಢರಿಗಿದುವೆ ಮೂಲತಮ ಭೇಧ

ತಿಳಿದವರಿಗೂ, ತಿಳಿಯದವರಿಗೂ ಜಗತ್ತು ಸತ್ಯವಾಗಿರುತ್ತದೆ. ಜ್ಞಾನಹೀನರಿಗೆ ಲೋಕ ಮಾತ್ರವೇ ಸತ್ಯ. ಜ್ಞಾನಿಗಳಿಗೆ ಸತ್ಯ ಎಂಬುದು ಲೋಕಕ್ಕೆ ಆಧಾರವಾಗಿ ಅರೂಪವಾಗಿ ತುಂಬಿಕೊಂಡಿರುತ್ತದೆ. ಇದೇ ಇವರಿಬ್ಬರಲ್ಲಿನ ವ್ಯತಾಸ.

To those who do not know and to those who do, the world is real. But to those who do not know, Reality is bounded by the world; while to those who know, Reality shines formless as the ground of the world. Such is the difference between them.

(೧೯)

ವಿಧೇಃ ಪ್ರಯತ್ನಸ್ಯ ಚ ಕೋಽಪಿವಾದ–
ಸ್ತಯೋರ್ದ್ವಯೋರ್ಮೂಲಮಜಾನತಂ ಸ್ಯಾತ್
ವಿಧೇಃ ಪ್ರಯತ್ನಸ್ಯ ಚ ಮೂಲವಸ್ತು
ಸಂಜಾನತಾಂ ನೈವ ವಿಧಿರ್ನ ಯತ್ನಃ

ವಿಧಿ ಹೆಚ್ಚೊ? ಪುರುಷಪ್ರಯತ್ನವೋ? ಭೇದವಿವು
ವಿಧಿ–ಪುರುಷ ಮೂಲವನ್ನರಿಯದವರಿಂಗೆ
ವಿಧಿ–ಪುರುಷ ಯತ್ನಗಳ ಮೂಲವಸ್ತುವನರಿತ
ಬುಧರಿಗೀ ದ್ವಂದ್ವಗಳ ಸ್ಪರ್ಷವೆಲ್ಲಿಯದು?

'ವಿಧಿ ವಾದಗಳ' ಮೂಲವಿವೇಕ ವಿಲ್ಲದವರಿಗೆ, ಅವರ ವಿವಾದ ಮಾತ್ರ ಕಾಣುತ್ತದೆ. ವಿಧಿ ವಾದಿಗಳಿಗೆ ಏಕಮೂಲವಾದ 'ತನ್ನನ್ನು' ತಿಳಿದವರು ಆ ಮಾಯೆಗೆ ಮರೆಯಾದವರು. ಆವರು ಮತ್ತೆ ಆ ಬಲೆಗೆ ಬಿದ್ದಾರೆಯೇ?

The debate, `Does free will prevail or fate?' is only for those who do not know the root of both. Those who have known the Self, the common source of freewill and of fate, have passed beyond them both and will not return to them.

(೨೦)

ಯದೀಶಿತುರ್ವ್ವೀಕ್ಷಣಮೀಕ್ಷಿತಾರ
ಮವೀಕ್ಷ್ಯ ತನ್ಮಾನಸಿಕೇಕ್ಷಣಂ ಸ್ಯಾತ್
ನ ದ್ರಷ್ಟುರನ್ಯಃ ಪರಮೋ ಹಿ ತಸ್ಯ
ವೀಕ್ಷಾ ಸ್ವಮೂಲೇ ಪ್ರವಿಲೀಯ ನಿಷ್ಠಾ

ನೋಡುವವ ತನ್ನ ನೋಡದೆ, ತಾನು ದೈವವನು
ನೋಡಲದು ಮಾನಸಿಕದರ್ಶನವೆ ಬಗೆಯೆ
ನೋಡುವವನೊಬ್ಬನೇ, ತನ್ನ ಮೂಲವ ತಾನು
ನೋಡಿ ಸ್ಥಿರವಾಗಿನಿಲೆ ಅದೆ ದೈವ ಕಾಣ್ಕೆ

ಎಲ್ಲವನ್ನೂ ನೋಡುತ್ತಿರುವ "ತನ್ನನ್ನು" ಕಾಣದೆ, ತಾನು ದೈವವನ್ನು ನೋಡುವುದು ಮಾನಸಿಕ ದರ್ಶನವೇ. ತನ್ನನ್ನು ನೋಡಬಲ್ಲವನೇ ದೈವವನ್ನು ನೋಡುವವನಂತೆ! ತನ್ನ ಮೂಲದಲ್ಲಿ, ತಾನು ಮೂಲವು ನಷ್ಟವಾಗಿ ನೋಡುವವನು ಜ್ಞಾನಿ.

To see God and not the Self that sees is only to see a projection of the mind. It is said that God is seen by him alone who sees the Self; but one who has lost the ego and seen the Self is none other than God.

(೨೧)

ಆತ್ಮಾನಮೀಕ್ಷೇತ ಪರಂ ಪ್ರಪಶ್ಯೇ-
ದಿತ್ಯಾಗಮೋಕ್ತೇಃ ಸುಲಭೋ ನ ಭಾವಃ
ನಾತ್ಮೈವ ದೃಶ್ಯೋ ಯದಿ ಕಾ ಕಥೇಶೇ
ಸ್ವಯಂ ತದನ್ನೀಭವನಂ ತದೀಕ್ಷಾ

ಆತ್ಮದರ್ಶನ ದೈವದರ್ಶನಗಳೆಂಬುದರ
ಸೂಕ್ಷ್ಮಾರ್ಥ ಕಠಿಣ, ದೃಗ್-ದೃಶ್ಯವೆರಡಿಲ್ಲ
'ಆತ್ಮ' ಸದ್ವಸ್ತುವಿಗೆ ಆಹಾರವಾಗೆ ಪರ-
ಮಾತ್ಮ ದರ್ಶನವದೇ ಈ 'ತಾನು'ಲಯಿಸಿ

ತನ್ನನ್ನು ತಾನು ನೋಡುವುದು, ತಾನು ದೈವವನ್ನು ನೋಡುವುದು ಎಂಬ ನಾನಾ ಶಾಸ್ತ್ರಗಳ ತಾತ್ಪರ್ಯವೇನು? ತನ್ನನ್ನು ತಾನು ನೋಡುವುದು ಹೇಗೆ? ತಾನು ಒಬ್ಬ ಬೇರೆಯಾಗಿ ನೋಡಲಾಗದು ಎಂದರೆ, ದೈವವನ್ನು ನೋಡುವುದು ಹೆಗೆ? ಅದು, ತಾನು ಆಹಾರವಾಗುವುದೇ.

When scriptures speak of `seeing the Self' and `seeing God', what is the truth they mean? How to see the Self? As the Self is one without a second, it is impossible to see it. How to see God? To see Him is to be consumed by Him.

(೨೨)

ಧಿಯೇ ಪ್ರಕಾಶಂ ಪರಮೋ ವಿತೀರ್ಯ
ಸ್ವಯಂ ಧಿಯೋನ್ತಃ ಪ್ರವಿಭಾತಿ ಗುಪ್ತಃ
ಧಿಯಂ ಪರಾವರ್ತ್ಯ ಧಿಯೋಂತರೇತ್ರ
ಸಂಯೋಜನಾನ್ನೇಶ್ವರದೃಷ್ಟಿರನ್ಯಾ

ಬುದ್ಧಿಗೆ ಬೆಳಕನಿತ್ತು, ಬುದ್ಧಿಯೊಳಗಾವರಿಸಿ
ಉದ್ದೀಪಿಸುವನ ಬುದ್ಧಿಯಿನರಿಯಲಳವೆ?
ಬುದ್ಧಿಯನು ಒಳಗೆ ತಿರುಗಿಸಿ ದೈವದಲಿ ಬೆಸೆಯೆ
ಸಿದ್ಧ ದರ್ಶನವಿದುವೆ ಮಾರ್ಗ ಬೇರಿಲ್ಲ

ದೈವ, ಬುದ್ಧಿಗೆ ಬೆಳಕು ನೀಡಿ ಆ ಬುದ್ಧಿಯ ಒಳಗೆ ಬೆಳಗುತ್ತದೆ. ಬುದ್ಧಿಯನ್ನು ಒಳಗೆ ತಿರುಗಿಸಿ, ಆ ತತ್ವದೊಡನೆ ಬೆರೆಯಬೇಕಲ್ಲದೆ, ಬುದ್ಧಿಯ ಸಹಾಯದಿಂದ ದೈವವನ್ನು ತಿಳಿಯುವುದು ಹೇಗೆ? ಯೋಚಿಸು. ಅಂದರೆ, ಬುದ್ಧಿಯನ್ನು ಒಳಗೆ ಸೇರಿಸಿ ನೋಡು.

Without turning inwards and merging in the Lord -- it is His light that shines within the mind and lends it all its light -- how can we know the Light of lights with the borrowed light of the mind?

(೨೩)

ನ ವಕ್ತಿ ದೇಹೋಹಮಿತಿ ಪ್ರಸುಪ್ತೌ
ನ ಕೋಪಿ ನಾಭೂವಮಿತಿಪ್ರವಕ್ತಿಃ
ಯತ್ರೋದಿತೇ ಸರ್ವಮುದ್ಯೈತಿ ತಸ್ಯ
ಧಿಯಾಹಮಃ ಶೋಧಯ ಜನ್ಮದೇಶಮ್

'ನಾನ್' ಎಂದು ಈ ದೇಹ ಹೇಳದೆಂದಿಗೂ
ನಾನಿಲ್ಲವೆನಲಹುದೆ ನಿದ್ರಾಸ್ಥಿತಿಯಲಿ?
ನಾನೆದ್ದಕ್ಷಣ ಸಕಲ ಜಗವೆಲ್ಲ ಹುಟ್ಟುವುದು
'ನಾನ್' ಉದಿಪ ಮೂಲ ಶೋಧಿಸು ಬುದ್ಧಿಯಿಂದ

'ನಾನು' ಎಂದು ಈ ದೇಹ ಹೇಳದು. ನಿದ್ರಿಸುವಾಗಲೂ ನಾನು ಇಲ್ಲ ಎಂದು ಯಾರೂ ಹೇಳಲಾರರು. ಈ "ನಾನು" ಹುಟ್ಟಿದ ಮರುಕ್ಷಣವೇ ಸಕಲವೂ ಹುಟ್ಟುವುದು. ಈ ನಾನು ಎಲ್ಲಿ ಹುಟ್ಟುತ್ತದೆ ಎಂದು ಸೂಕ್ಷ್ಮ ಬುದ್ಧಿಯಿಂದ ಶೋಧಿಸು.

The body says not it is `I'. And no one says, "In sleep there is no `I'." When `I' arises all (other) things arise. Whence this `I' arises, search with a keen mind.

(೨೪)

ದೇಹೋ ನ ಜಾನಾತಿ ಸತೋ ನ ಜನ್ಮ

ದೇಹಪ್ರಮಾಣೋನ್ಯ ಉದೇತಿ ಮಧ್ಯೇ

ಆಹಂಕೃತಿಗ್ರಂಥಿವಿಬಂಧ ಸೂಕ್ಷ್ಮ

ಶರೀರಚೇತೋಭವಜೀವನಾಮಾ

ಜನಿಸಿದೀ ಜಡದೇಹ ನಾನೆನದು, ಸದ್ವಸ್ತು

ಜನನವಿಲ್ಲದಕೆ; ಈ 'ನಾನು'ಮಧ್ಯದಲಿ

ಜನಿಸಿತದು; ಚಿಜ್ಜಡಗ್ರಂಥಿ, ಸೂಕ್ಷ್ಮಶರೀರ

ಮನ, ಬಂಧ, ಜೀವ ಮುಂತಾದ ಹೆಸರಿನಲಿ

ಜಡಶರೀರ 'ನಾನು' ಎನ್ನುವುದಿಲ್ಲ. ಸದ್ವಸ್ತುವಿಗೆ ಜನನವಿಲ್ಲ. ಈ ಮಧ್ಯೆ ದೇಹಪರಿಮಾಣ ರೂಪವಾಗಿ 'ನಾನು' ಹುಟ್ಟುವುದು. ಇದನ್ನೇ ಚಿಜ್ಜಡಗ್ರಂಥಿ, ಬಂಧನ, ಜೀವ, ಶೂಕ್ಷ್ಮಶರೀರ, ಅಹಂಕಾರ, ಸಂಸಾರ, ಮನಸ್ಸು ಎಂಬುದಾಗಿ ತಿಳಿ.

The body says not it is `I'. And no one says, "In sleep there is no `I'." When `I' arises all (other) things arise. Whence this `I' arises, search with a keen mind.

(೨೫)

ರೂಪೋದ್ಭವೋ ರೂಪತತಿಪ್ರತಿಷ್ಠೋ
ರೂಪಾಶನೋ ಧೂತಗೃಹೀತರೂಪಃ
ಸ್ವಯಂ ವಿರೂಪಃ ಸ್ವವಿಚಾರಕಾಲೇ
ಧಾವತ್ಯಹಂಕಾರಪಿಶಾಚ ಏಷಃ

ರೂಪದಿಂ ಜನಿಸಿ ರೂಪಗಳಲ್ಲಿ ನೆಲಸುತ್ತ
ರೂಪಿನಿಂ ಭುಜಿಸಿ, ವೃದ್ಧಿಸಿ, ರೂಪ ಬಿಟ್ಟು
ರೂಪ ತಳೆವುದು, ವಿಚಾರಿಸಲು ಬಿಟ್ಟೋಡುವುದು
ರೂಪಿರದಹಂಕಾರವೆಂಬ ಪೆಂಭೂತ

ರೂಪವನ್ನು ತಳೆದು ಹುಟ್ಟುವುದು, ರೂಪವನ್ನು ಆಧರಿಸಿ ನಿಲ್ಲುವುದು, ರೂಪದ ನೆರವಿನಿಂದ ಭುಜಿಸಿ, ಬೆಳೆಯುವುದು. ರೂಪವನ್ನು ಬಿಟ್ಟು ರೂಪವನ್ನು ತಾಳುವುದು. ಯಾವುದಿದು? ಎಂದು ಹುಡುಕಿ ನೋಡಲು ಓಡಿಹೋಗುವುದು, ಆ ರೂಪವಿಲ್ಲದ ಅಹಂಕಾರಪಿಶಾಚ.

Holding a form it rises; holding a form it stays; holding and feeding on a form it thrives. Leaving one form, it takes hold of another. When sought, it takes to flight. Such is the ego-ghost with no form of its own.

(೨೬)

ಭಾವೇಹಮಃ ಸರ್ವಮಿದಂ ವಿಭಾತಿ

ಲಯೇಹವೋ ನೈವ ವಿಭಾತಿ ಕಿಂಚಿತ್

ತಸ್ಮಾದಹಂರೂಪಮಿದಂ ಸಮಸ್ತಂ

ತನ್ಮಾರ್ಗಣಂ ಸರ್ವಜಯಾಯಮಾರ್ಗಃ

ಅಹಮಿಂದ ತೋರುವುದು ಸಕಲಜಗವೆಲ್ಲವೂ

ಅಹಮಳಿಯೆ ಜಗವಳಿವುದದರರ್ಥ ವೇನೆ?

ಅಹಮೆ ಸಕಲವು ಅಹಂಕಾರಮೂಲದ ಶೋಧ

ವಿಹಿತ ಸರ್ವವ ಜಯಿಪ ನಿಜ ರಾಜಮಾರ್ಗ

ಆಹಂಕಾರ ಇದೆ ಎಂದಾಗಮಾತ್ರ, ಸಕಲವೂ ಇವೆ. ಅದಿಲ್ಲವಾದರೆ, ಯಾವುದೂ ಇಲ್ಲ. ಆದ್ದರಿಂದ ಅಹಂಕಾರವೇ ಎಲ್ಲವೂ ಆಗುತ್ತದೆ. ಅಂದಮೇಲೆ, ಈ ಅಹಂಕಾರವು ಯಾವುದು ಎಂಬ ಅನ್ವೇಷಣೆಯೇ, ಸಕಲವನ್ನೂ ಬಿಡುವುದು ಎಂದು ತಿಳಿ.

When the ego rises all things rise with it. When the ego is not, there is nothing else. Since the ego thus is everything, to question `What is this thing?' is the extinction of all things.

(೨೭)

ಸತ್ಯ ಸ್ಥಿತಿರ್ನಾಹಮುದೇತಿ ಯತ್ರ
ತಚ್ಚೋದಯಸ್ಥಾನಗವೇಷಣೇನ
ವಿನಾ ನ ನಶ್ಯೇದ್ಯದಿ ತನ್ನ ನಶ್ಯೇತ್
ಸ್ವಾತ್ಮೈಕರೂಪಾ ಕಥಮಸ್ತು ನಿಷ್ಠಾ

'ನಾನು' ಹುಟ್ಟದ ಸ್ಥಿತಿಯು ನಾವ್ 'ಅದೇ' ಆದ ಸ್ಥಿತಿ
'ನಾನ್'ಎಂಬುದರಮೂಲ ಶೋಧ ಮಾಡದಲೆ
'ನಾನು' ನಶಿಸದು ಅನ್ಯಮಾರ್ಗದಿಂ, ಆ 'ನಾನು'
ಕ್ಷೀಣಿಸದೆ ಆತ್ಮಸ್ಥಿತಿಯ ನಿಷ್ಠೆಯೆಂತು?

'ನಾನು' ಎಂಬುದು ಹುಟ್ಟದೆ ಇರುವ ಸ್ಥಿತಿಯೇ – ನಾವು 'ಅದು ಆಗಿ' ಇರುವ ಸ್ಥಿತಿ. "ನಾನು" ಹುಟ್ಟುವ ಮೂಲವನ್ನು ಹುಡುಕಿ, ಸೇರದೆ; "ನಾನು" ಹುಟ್ಟದ 'ತನ್ನ' ನಾಶ ಹೇಗೆ ಸಾಧ್ಯ? ಆದನ್ನು ಹೊಂದದೆ, 'ತಾನು' ಅದೇ ಆದ ಸ್ಥಿತಿಯಲ್ಲಿ ನಿಲ್ಲಲು ಸಾಧ್ಯವಾಗುವುದು ಹೇಗೆ?

`That' we are, when `I' has not arisen. Without searching whence the `I' arises, how to attain the self-extinction where no `I' arises? Without attaining self-extinction, how to stay in one's true state where the Self is `That'?

(೨೮)

ಕೂಪೇ ಯಥಾ ಗಾಢಜಲೇ ತಥಾಂತಃ
ನಿಮಜ್ಜ್ಯ ಬುದ್ಧ್ಯಾ ಶಿತಯಾ ನಿತಾಂತಮ್
ಪ್ರಾಣಂ ಚ ವಾಚಂಚ ನಿಯಮ್ಯಚಿನ್ವನ್
ವಿಂದೇನ್ನಿಜಾಹಂಕೃತಿಮೂಲ ರೂಪಂ

ಮುಳುಗಿ ಬಾವಿಯ ತಳಕೆ, ಕಳೆದ ವಸ್ತುವ ಹಿಡಿವ
ಪಳಗಿದೀಜುಗ ನಂತಹಂಕಾರ ತಳಕೆ
ಬಳಸಿ ಮತಿ ಸೂಕ್ಷ್ಮತೆಯ ವಾಕ್ಪ್ರಾಣ ಬಂಧಿಸುತ
ಇಳಿದು ಮನದೊಳಗೆ ಶೋಧಿಸೆ ಸತ್ಯ ಸ್ಫುರಣೆ

ಒಬ್ಬ, ಬಾವಿಯಲ್ಲಿ ಮುಳುಗಿದ ವಸ್ತುವನ್ನು ಹೊರಗೆ ತೆಗೆಯಲು, ನೀರಿನಲ್ಲಿ ಮುಳುಗುವಂತೆ, 'ನಾನು' ಹುಟ್ಟುವ ಮೂಲವನ್ನು, ತೀಕ್ಷ್ಣವಾದ ಬುದ್ಧಿಯಿಂದ, ವಾಕ್–ಪ್ರಾಣ ಬಂಧನದಿಂದ, ಆಳಕ್ಕೆ ಮುಳುಗಿ ತಿಳಿಯಬೇಕು.

Controlling speech and breath, and diving deep within oneself -- like one who, to find a thing that has fallen into water, dives deep down -- one must seek out the source whence the aspiring ego springs.

(೨೯)

ಮೌನೇನ ಮಜ್ಜನ್ಮನಸಾ ಸ್ವಮೂಲಾ-
ಚರ್ಚೈವ ಸತ್ಯಾತ್ಮವಿಚಾರಣಂಸ್ಯಾತ್
ಏಷೋಹಮೇತನ್ನ ಮಮ ಸ್ವರೂಪ
ಮಿತಿ ಪ್ರಮಾ ಸತ್ಯವಿಚಾರಣಾಂಗಂ

'ನಾನ್'ಎನದೆ ಮನ ಮುಳುಗಿ, ಮನದೊಳಗಿನಿಂದೆಲ್ಲಿ
'ನಾನು' ಬೆಳಗುವುದೊ ಆ ಶೋಧನೆಯೆ ಜ್ಞಾನ
ನಾನಲ್ಲವಿದು, 'ನಾನು ಅದು' ಎಂಬ ಭಾವನೆ ಪ್ರ-
ಧಾನ ಚಿಂತೆಯೆ ಚಿಂತಿಸಲು ಸಹಾಯಕವು

'ನಾನು' ಎಂದು ಮಾತಿನಿಂದ ನುಡಿಯದೆ, ಒಳಗೆ ಮುಳುಗುವ ಮನಸ್ಸಿನಿಂದಾಗಿ, "ನಾನು" ಬೆಳಗುವುದೆಲ್ಲಿ ಎಂಬ ಶೋಧನೆಯೇ ಜ್ಞಾನವಿಚಾರ. ಅಷ್ಟಲ್ಲದೆ, " ಇದು ನಾನು ಅಲ್ಲ" "ಅದು ನಾನು ಆಗುತ್ತೇನೆ" ಎಂದು ಭಾವಿಸುವುದು, ಕೇವಲ ಸಹಾಯ ಮಾತ್ರ ಆಗುವುದಲ್ಲದೆ, ಅದೇ ವಿಚಾರವಾಗುತ್ತದೆಯೇ?

Cease all talk of `I' and search with inward diving mind whence the thought of `I' springs up. This is the way of wisdom. To think, instead, `I am not this, but That I am,' is helpful in the search, but it is not the search itself.

(೩೦)

ಗವೇಶಣಾತ್ಪ್ರಾಪ್ಯ ಹೃದಂತರಂ ತತ್
ಪತೇದಹಂತಾ ಪರಿಭುಗ್ನಶೀರ್ಷಾ
ಅಥಾಹಮನ್ಯತ್ ಸ್ಫುರತಿ ಪ್ರಕೃಷ್ಟಂ
ನಾಹಂಕೃತಿಸ್ತತ್ಪರಮೇವ ಪೂರ್ಣಂ

ನಾನು ಯಾರೆಂದು ಮನ ಹುಡುಕಿ ಹೃದಯವ ಸೇರೆ
ನಾನೆಂಬುದರ ಶಿರಚ್ಛೇದವಾಗುವುದು
ನಾನು ನಾನೆಂದು ಬೇರೊಂದು ಸುಳಿವುದು ಮುಂದೆ
ತಾನಹಂಕೃತಿಯಲ್ಲ ಪೂರ್ಣಾತ್ಮವದುವೇ

"ನಾನು" ಯಾರೆಂದು ಹುಡುಕುತ್ತಾ ಮನಸ್ಸು, ಬುದ್ಧಿಗಳನ್ನು ದಾಟಿ, ಹೃದಯಸ್ಥಾನವನ್ನು ಸೇರಿದಾಗ, "ನಾನು"ಎಂಬುವನು ತಲೆಕೆಳಗಾಗಿ ಬಿದ್ದು, ಅಲ್ಲೇ, "ನಾನು" "ನಾನು" ಎನ್ನುತ್ತ ಒಂದು ವಸ್ತು ಗೋಚರಿಸುವುದು. ಹಾಗೆ ತೋರಿದರೂ ಅದು ಅಹಂಕಾರವಲ್ಲ. ಪರಿಪೂರ್ಣ ವಸ್ತುವೇ ಅದು.

When the mind turns inward seeking ' Who am I?' and merges in the Heart, then the `I' hangs down his head in shame and the One `I' appears as Itself. Though it appears as `I-I', it is not the ego. It is Reality, Perfection, the Substance of the Self.

(೩೧)

ಅಹಂಕೃತಿಂ ಯೋ ಲಸತಿ ಗ್ರಸಿತ್ವಾ
ಕಿಂ ತಸ್ಯ ಕಾರ್ಯಂ ಪರಿಶಿಷ್ಟಮಸ್ತಿ
ಕಿಂಚಿದ್ವಿಜಾನಾತಿ ಸ ನಾತ್ಮನೋಽನ್ಯತ್
ತಸ್ಯ ಸ್ಥಿತಿಂ ಭಾವಯಿತುಂ ಕ್ಷಮಃ ಕಃ

ತನ್ನಹಂಕಾರವನು ನುಂಗಿ ಪ್ರಜ್ವಲಿಸುವಾ
ತನ್ಮಯಾನಂದ ನೆಸಗಲು ಕಾರ್ಯವುಂಟೆ?
ಭಿನ್ನ ತನಗನ್ಯತ್ರ ವಿಲ್ಲ ವೆಂದೆನುವನವ ನಾ
ಉನ್ನತ ಸ್ಥಿತಿಯ ನಾವರಿವ ಬಗೆ ಎಂತು?

"ನಾನು" ಎಂಬುದನ್ನು ನುಂಗಿ ಪ್ರಜ್ವಲಿಸಿ, ತನ್ಮಯನಾಗಿ ಆನಂದದಲ್ಲಿರುವನು, ಮಾಡಬೇಕಾದ ಕೆಲಸವೇನಿದೆ? ಅವನು ತನಗಿಂತ ಬೇರೆಯಾದ ಯಾವುದನ್ನೂ ತಿಳಿಯದವನು. ಅವನ ಸ್ಥಿತಿ, ಇಂಥದ್ದೇ ಎಂದು ನಾವು ತಿಳಿಯುವುದು ಹೇಗೆ?

For him who is the Bliss of Self arising from extinction of the ego, what is there to do? He knows nothing other than this Self. How to conceive the nature of his state?

(೩೨)

ಆಹ ಸ್ಫುಟಂ ತತ್ವಮಸೀತಿ ವೇದ–
ಸ್ತಥಾಪ್ಯ ಸಂಪ್ರಾಪ್ಯ ಪರಾತ್ಮ ನಿಷ್ಠಾಂ
ಭೂಯೋ ವಿಚಾರೋ ಮತಿದುರ್ಬಲತ್ವಂ
ತತ್ಸರ್ವದಾ ಸ್ವಾತ್ಮತಯಾ ಹಿ ಭಾತಿ

'ಅದು'ನೀನು ಯೆಂದು ಘೋಷಿಸೆ ವೇದ 'ನಾನು' ಯಾ–
ವುದು ಯೆಂದು ತಿಳಿದು ನಿಲ್ಲದೆ, 'ನಾನು ಇದುವೇ'
'ಇದು ನಾನು ಅಲ್ಲ' ವೆಂಬಾಚಂಚಲತೆಯೇಕೆ
'ಅದು' ನಾನು ಸರ್ವಕಾಲದಿ ಹೊಳೆವ ಬೆಳಕು

"ಅದೇ ನೀನು" ಎಂದು ವೇದಗಳು ಉದ್ಘೋಷಿಸುತ್ತಿರಲು, ತನ್ನನ್ನು, ತಾನು ಯಾರು ಎಂದು ತಿಳಿಯದೆ, "ಅದು ನಾನು" "ಇದು ಅಲ್ಲ" ಎಂದು ತಿಳಿಯುವುದು, ಮನೋಬಲ ಇಲ್ಲವಾದಾಗಲೇ. ಯಾವಾಗಲೂ ಅದು, ತಾನಾಗಿ ಬೆಳಗುತ್ತಲೇ ಇರುವುದಲ್ಲವೆ?

When the Vedas have declared, `Thou art That' --
not to seek and find the nature of the Self and abide in It,
but to think `I am That, not This' is want of strength.
Because, That abides for ever as the Self.

(೩೩)

ನ ವೇದ್ಮ್ಯಹಂ ಮಾಮುತ ವೇದ್ಮ್ಯಹಂ ಮಾ
ಮಿತಿ ಪ್ರವಾದೋ ಮನುಜಸ್ಯ ಹಾಸ್ಯಃ
ದೃಗ್ ದೃಶ್ಯಭೇದಾತ್ಕಿಮಯಂ ದ್ವಿಧಾತ್ಮಾ
ಸ್ವಾತ್ಮೈಕತಾಯಾಂ ಹಿ ಧಿಯಾ ನ ಭೇದಾಃ

'ನಾನರಿತೆ ನೆನ್ನ' ತಿಳಿಯೆನು ನಾನು ನನ್ನ ಎನು-
ವಾನುಡಿಯು ಹಾಸ್ಯಾಸ್ಪದವು ವಿಚಾರಿಸಲು
ನಾ ನೋಡುವವ, ದೃಶ್ಯಬೇರೆನ್ನಲೆರಡಾತ್ಮ
ತಾನಿಹುದೆ? ಏಕವೆಲ್ಲರಿಗದನುಭವವು

"ನನ್ನನ್ನು ನಾನು ತಿಳಿದಿಲ್ಲ", "ನನ್ನನ್ನು ನಾನು ಅರಿತಿದ್ದೇನೆ" ಎಂದು ಹೇಳುವುದು, ಹಾಸ್ಯಾಸ್ಪದವಾಗಿದೆ. ಏಕೆ? ತನ್ನನ್ನು ತನಗೆ ವಿಷಯವನ್ನಾಗಿ ಮಾಡಿದರೆ, ತಾನು ಎರಡಾಗುತ್ತದೆಯೇ? ತಾನು ಏಕವಾಗಿರುವುದು ಎಲ್ಲರಿಗೂ ಅನುಭವಸಿದ್ಧವೇ.

To say `I do not know myself' or `I have known myself' is cause for laughter. What? Are there two selves, one to be known by the other? There is but One, the Truth of the experience of all.

(೩೪)

ಹೃತ್ಪ್ರಾಪ್ಯಸದ್ಧಾಮ ನಿಜಸ್ವರೂಪೇ
ಸ್ವಭಾವಸಿದ್ಧೇನುಪಲಭ್ಯ ನಿಷ್ಠಾಮ್
ಮಾಯಾವಿಲಾಸಃ ಸದಸತ್ಸರೂಪ–
ವಿರೂಪನಾನ್ಯೈಕಮುಖಪ್ರವಾದಾಃ

ಇರುವುದೆಲ್ಲೆಲ್ಲು ಸ್ವಭಾವಸಿದ್ಧವು ಸದಾ
ಸ್ಥಿರದಿ ಸ್ವಸ್ಥಾನ ಹೃದಯದಿ ತಿಳಿದು ನಿಲದೆ
ಎರಡೊಂದು, ಇಹುದಿಲ್ಲ, ರೂಪವಿದೆ, ಇಲ್ಲವೆನು–
ವರ ವಾದ ಚರ್ಚೆ ಬರಿ ಮಾಯಾವಿಲಾಸ

ಸರ್ವದಾ, ಸಕಲರಿಗೂ ಸ್ವಭಾವವಾಗಿರುವ ವಸ್ತುವನ್ನು, ಸ್ವಸ್ಥಾನವಾದ ಹೃದಯದಲ್ಲಿ ಅರಿತು, ಆ ಸ್ಥಿತಿಯಲ್ಲಿ ಸ್ವಸ್ಥತೆ ಹೊಂದದೆ; ಇದೆ – ಇಲ್ಲ, ರೂಪ – ಅರೂಪ, ಏಕ – ದ್ವಯ, ಅಥವಾ ಎರಡೂ ಅಲ್ಲ ಎಂದು ವಾದಿಸುವುದು – ಮಾಯಾದೋಷ.

The natural and true Reality forever resides in the Heart of all. Not to realize It there and stay in It but to quarrel `It is', `It is not', `It has form', `It has not form', `It is one', `It is two', `It is neither', this is the mischief of *maya*

(೩೫)

ಸಿದ್ಧಸ್ಯ ವಿತ್ತಿಃ ಸತ ಏವ ಸಿದ್ಧಿಃ
ಸ್ವಪ್ನೋಪಮಾನಾಃ ಖಲು ಸಿದ್ಧಯೋನ್ಯಾಃ
ಸ್ವಪ್ನಃ ಪ್ರಭುದ್ಧಸ್ಯ ಕಥಂನು ಸತ್ಯಃ
ಸತಿ ಸ್ಥಿತಃ ಕಿಂ ಪುನರೇತಿ ಮಾಯಾಮ್

ಸಿದ್ಧವಾಗಿಹ ವಸ್ತುವನ್ನರಿವುದೇ ಸಿದ್ಧಿ
ಸಿದ್ಧಿ ಸರ್ವಸ್ವವೂ ಕನಸಿರುವವರೆಗೆ
ನಿದ್ದೆಬಿಡಲವು ನಿಜವೆ? ಮಾಯೆಯನು ದಾಟಿದಾ
ಸದ್ವಸ್ತು ನಿಷ್ಠ ಮಾಯೆಗೆ ಪುನರ್ವಶನೇ?

ಸಿದ್ಧವಾಗಿರುವ ವಸ್ತುವನ್ನು ತಿಳಿದುಕೊಳ್ಳುವುದೇ ಸಿದ್ಧಿ. ಇತರ ಸಿದ್ಧಿಗಳೆಲ್ಲವೂ, ಕನಸಿನಲ್ಲಿ ವಶವಾದ ಸಿದ್ಧಿಗಳೇ. ನಿದ್ರೆ ಮುಗಿದು, ಎಚ್ಚೆತ್ತ ಬಳಿಕ ಅವು ಸತ್ಯವಾಗುತ್ತವೆಯೇ? ಸತ್ಯವಸ್ತುನಿಷ್ಠರಾಗಿ, ಮಾಯೆಯನ್ನು ದಾಟಿದವರು, ಈ ಸಿದ್ಧಿಗಳಿಗೆ ಮೋಹಗೊಳ್ಳುವರೇ? ಇಲ್ಲ.

To discern and abide in the ever-present Reality is true attainment. All other attainments are like powers enjoyed in a dream. When the sleeper wakes, are they real? Those who stay in the state of Truth, having cast off the unreal -- will they ever be deluded?

(೩೬)

ಸೋಽಹಂ ವಿಚಾರೋ ವಪುರಾತ್ಮಭಾವೇ
ಸಾಹಾಯ್ಯಕಾರೀ ಪರಮಾರ್ಗಣಸ್ಯ
ಸ್ವಾತ್ಮೈಕಸಿದ್ಧೌ ಸ ಪುನರ್ನಿರರ್ಥೋ
ಯಥಾ ನರತ್ವಪ್ರಮಿತಿರ್ನರಸ್ಯ

ತನು ಆತ್ಮವೆಂದು ತಿಳಿದಿರುವನಕ ‘ಅದೆ ನಾನು’
ಮನ ಅಹಂಬ್ರಹ್ಮಾಸ್ಮಿ ಜಪಿಸಲನುಕೂಲ
ತನಗಾತ್ಮ ಸಿದ್ಧಿಸಲು ಆ ಜಪದ ಹಂಗೇಕೆ?
ನೆನೆಯಬೇಕೇಕೆ ನರ ತಾನು ನರನೆಂದು?

ನಾವು ಈ ಶರೀರ ಎಂಬ ಭಾವನೆ ಬಂದ ಮರುಕ್ಷಣ, ನಾವು ಇದು ಅಲ್ಲ. ನಾವು ಅದು, ಆ ಸ್ವರೂಪ ಎಂದು ಭಾವಿಸುವುದು – ನಾವು, ಅದು ಆಗಿ ನಿಲ್ಲಲು ಸಹಾಯಕ. ಆದರೆ, ಯಾವಾಗಲೂ ನಾವು ಅದೇ ಎಂದು ತಿಳಿಯಬೇಕೇಕೆ? ನಾನು ಮನುಷ್ಯ, ನಾನು ಮನುಷ್ಯ ಎಂದು ನೆನಪಿಸಿಕೊಳ್ಳುತ್ತಿರಬೇಕೆ? ಸರ್ವದಾ ನಾವು ಅದೇ ಆಗಿರುವೆವಲ್ಲ?

If we think we are the body, then to tell ourselves, `No, I am That', is helpful to abide as That. Yet -- since ever we abide as That -- why should we always think, `I am That?' Does one ever think, `I am a man'?

(೩೭)

ದ್ವೈತಂ ವಿಚಾರೇ ಪರಮಾರ್ಥಬೋಧೇ
ತ್ವದ್ವೈತಮಿತ್ಯೇಷ ನ ಸಾಧುವಾದಃ
ಗವೇಷಣಾತ್ಪ್ರಾಗ್ದಶಮೇ ವಿನಷ್ಟೇ
ಪಶ್ಚಾಚ್ಚ ಲಬ್ಧೇ ದಶಮತ್ವಮೇಕಂ

'ಸಾಧನೆಗೆ ದ್ವೈತವೇ', 'ಸಾಧ್ಯಕ್ಕೆ ಅದ್ವೈತ'
ವಾದವಿದು ಪೊಳ್ಳು, ಹತ್ತನೆಯವನು ಕಳೆದು–
ಹೋದನಂತರ ಎಣಿಸಿದಾಗ ಸಿಕ್ಕಿದನೇನು?
ಆ ದಶಮನಿಹ ಸರ್ವದಾ ಸರ್ವವ್ಯಾಪಿ

"ಸಾಧನೆಗೆ ದ್ವೈತವೇ ಸರಿ, ಸಾಧ್ಯದಲ್ಲೇ ಅದ್ವೈತ ಎಂಬುವರ ವಾದ, ವಾಸ್ತವವಾದುದಲ್ಲ. ಆದರದಿಂದ ಹತ್ತನೆಯವನನ್ನು ಹುಡುಕುವಾಗ, ತನ್ನನ್ನು ತಾನೇ ಪಡೆದುಕೊಂಡ ವೇಳೆಯಲ್ಲಿ, ತಾನು ಹತ್ತನೆಯವನೇ ಅಲ್ಲದೆ ಬೇರೆ ಯಾರು?

(ಹತ್ತು ಮಂದಿ ಮೂರ್ಖ ಶಿಷ್ಯರು, ತಾವು ಹೊಳೆ ದಾಟಿದಮೇಲೆ, ತಾವು ಹತ್ತು ಮಂದಿಯೂ ಸರಿಯಾಗಿ ಇದ್ದೇವೆಯೋ, ಇಲ್ಲವೋ, ಎಂಬ ಸಂಶಯ ಬಂದಿತಂತೆ. ಪ್ರತಿಯೊಬ್ಬರು ಎಣಿಸಿದರೂ, ಒಟ್ಟು ಒಂಭತ್ತೇ ಮಂದಿ ಇದ್ದಂತೆ ತೋರಿ ಗೋಳಿಟ್ಟರಂತೆ. ದಾರಿಹೋಕನೊಬ್ಬ, ಅವರ ಮೂರ್ಖತೆಯನ್ನು ಗಮನಿಸಿ, ಸರಿಯಾಗಿ ಎಣಿಸಿ ತೋರಿಸಿದಾಗ, ಹತ್ತನೆಯವನು, ಕಳೆದು ಹೋಗಿದ್ದು, ಮತ್ತೆ ಸಿಕ್ಕಿಬಿಟ್ಟಂತೆ, ಶಿಷ್ಯರು ಆನಂದಿತರಾದರಂತೆ. ಇಲ್ಲಿ, ಎಲ್ಲರು ಎಣಿಸಿದ್ದೂ, ತನ್ನನ್ನು ಬಿಟ್ಟೇ!)

`During the search, duality; on attainment, unity' -- This doctrine too is false. When eagerly he sought himself and later when he found himself, the tenth man in the story was the tenth man and none else (ten men crossed a stream and wanted to make sure they were all safe. In counting, each one left himself out and found only nine. A passer-by gave each a blow and made them count the ten blows).

(೩೮)

ಕರೋಮಿ ಕರ್ಮೇತಿ ನರೋ ವಿಜಾನನ್

ಬಾಧ್ಯೋ ಭವೇತ್ಕರ್ಮಫಲಂ ಚ ಭೋಕ್ತುಂ

ವಿಚಾರಧೂತಾ ಹೃದಿ ಕರ್ತೃತಾ ಚೇತ್

ಕರ್ಮತ್ರಯಂ ನಶ್ಯತಿ ಸೈವ ಮುಕ್ತಿಃ

ಕರ್ತನಾನೆಂದು ತಿಳಿದಾಚರಿಸೆ ಕರ್ಮಗಳ

ಭೋಕ್ತ ನಾನೇ. ಕರ್ತನಾರೆಂದು ತಿಳಿದು

ವರ್ತಿಸಲು ಕರ್ತೃತ್ವವಳಿದು ಕರ್ಮತ್ರಯದ

ಪೂರ್ತಿಲಯವದೆ ನಿತ್ಯ ಮುಕ್ತಿಪಥವು

ನಾವು ಕರ್ಮ ಮಾಡುವವರೆಂದು ತಿಳಿದರೆ, ಕರ್ಮ ಫಲಗಳನ್ನು ಪಡೆಯುವವರೂ ಆಗುತ್ತೇವೆ. ಮಾಡುವ 'ಕರ್ತ' ಯಾರೆಂದು ಕೇಳಿ, ತನ್ನನ್ನು ತಿಳಿದಾಗ, ಕರ್ತೃತ್ವವು ಹೋಗಿ, ಕರ್ಮತ್ರಯಗಳೂ ಇರುವುದಿಲ್ಲ. ಇದೇ ನಿತ್ಯಮುಕ್ತಿಪಥ.

If we are the doers of deeds, we should reap the fruits they yield. But when we question, `Who am I, the doer of this deed?' and realize the Self, the sense of agency is lost and the three *karmas* slip away. Eternal is this Liberation.

(೩೯)

ಬದ್ಧತ್ವಭಾವೇ ಸತಿ ಮೋಕ್ಷಚಿಂತಾ
ಬಂಧಸ್ತು ಕಸ್ಯೇತಿ ವಿಚಾರಣೇನ
ಸಿದ್ಧೇ ಸ್ವಯಂ ಸ್ವಾತ್ಮನಿ ನಿತ್ಯಮುಕ್ತೇ
ಕ್ವ ಬಂಧಚಿಂತಾ ಕ್ವ ಚ ಮೋಕ್ಷಚಿಂತಾ

ಬಂಧವೆನಗುಂಟೆನಲು ಬಂಧಮುಕ್ತಿಯ ಚಿಂತೆ
ಬಂಧಯಾರಿಗೆ ಎಂದು ತನ್ನ ಶೋಧಿಸಲು
ಬಂಧ ಸೋಂಕದ ಪರಬ್ರಹ್ಮತತ್ವದ ಸಿದ್ಧಿ
ಬಂಧ-ಮೋಕ್ಷದ ಚಿಂತೆ ನಂತರವದೆಲ್ಲಿ?

"ನಾನು ಬದ್ಧ , ಪಾಶ ಬಂಧಿತ" ಎಂದು ತಿಳಿದಿರುವವರೆಗೆ ಮಾತ್ರ, ಬಂಧದಿಂದ ಬಿಡುಗಡೆಯ ಚಿಂತೆ ಇರುತ್ತದೆ. ಬಂಧನವೇ ಇಲ್ಲದ 'ನಿತ್ಯ ಮುಕ್ತ ಸ್ವರೂಪ' ತಾನಾಗಿರುವ ಅರಿವು ಬಂದಮೇಲೆ , ಬಂಧನದ ಅಥವಾ ಮುಕ್ತಿಯ ಚಿಂತೆಯೆಲ್ಲಿ?

Thoughts of bondage and of freedom last only as long as one feels, `I am bound'. When one inquires of oneself, `Who am I, the bound one?' the Self, Eternal, ever free, remains. The thought of bondage goes; and with it goes the thought of freedom too.

(೪೦)

ರೂಪಿಣ್ಯ ರೂಪಿಣ್ಯುಭಯಾತ್ಮಿಕಾ ಚ
ಮುಕ್ತಿಸ್ತ್ರಿರೂಪೇತಿ ವಿದೋ ವದಂತಿ
ಇದಂ ತ್ರಯಂ ಯಾ ವಿವಿನಕ್ತ್ಯಹಂಧೀ-
ಸ್ತಸ್ಯಾಃ ಪ್ರಣಾಶಃ ಪರಮಾರ್ಥಮುಕ್ತಿಃ

ರೂಪನು ಅರೂಪ ರೂಪಾರೂಪವೆನುತ ತ್ರಿ-
ರೂಪಗಳ ಮುಕ್ತಿಯನು ವಿಂಗಡಿಸೆ ವಿದರು
ರೂಪ ಮೂರನು ವಿವೇಚಿಸುವಹಂಕಾರ ಸ್ವ-
ರೂಪ ನಾಶವೆ ರೂಢ ಮುಕ್ತಿಯಹುದು

ರೂಪ, ಅರೂಪ, ರೂಪಾರೂಪ ಎಂದು ಮೂರುಬಗೆಯ ಮುಕ್ತಿ ಇದೆ ಎನ್ನುತ್ತಾರಲ್ಲ? ಆ ರೂಪ, ಆರೂಪ, ರೂಪಾರೂಪ ಗಳನ್ನು ಕುರಿತು ತಿಳಿಯುತ್ತಿರುವ ಅಹಂಕಾರರೂಪವು ನಾಶಹೋಂದುವುದೇ ಮುಕ್ತಿ ಎಂದು ತಿಳಿ.

If asked, `Which of these three is final liberation: With form, without form, or with-and-without-form?' I say, Liberation is the extinction of the ego which enquires `With form, without form, or with-and-without-form?'

ಸದ್ದರ್ಶನಂ ದ್ರಾವಿಡವಾಙ್ನಿಬದ್ಧಂ
ಮಹರ್ಷಿಣಾ ಶ್ರೀರಮಣೇನ ಶುದ್ಧಂ
ಪ್ರಬಂಧ ಮುತ್ಕೃಷ್ಟಮಮರ್ತ್ಯ ವಾಣ್ಯಾ
ಮನೂದ್ಯ ವಾಸಿಷ್ಠಮುನಿರ್ವ್ಯತಾನೀತ್

ತಮಿಳುಭಾಷೆಯಲಿ 'ಉಳ್ಳದು ನಾರ್ಪದು' ಎನುವ
ರಮಣ ಸದ್ಗುರು ರಚಿತ ಶುದ್ಧ ಬೋಧೆಯನು
ರಮಣ ಹೃದಯವನರಿತ ವಾಸಿಷ್ಠಮುನಿ ಲಿಖಿತ
ಅಮರಭಾಷರೂಪ ಸದ್ದರ್ಶನವಿದು

ತಮಿಳಿನಲ್ಲಿ ರಮಣಮಹರ್ಷಿಗಳು ರಚಿಸಿದ "ಉಳ್ಳದು ನಾರ್ಪದು", ಇರುವ ಸದ್ವಸ್ತುವನ್ನು ಕುರಿತ ನಲವತ್ತು ಪದ್ಯಗಳ ತತ್ವಬೋಧೆ. ವಾಸಿಷ್ಠ ಗಣಪತಿ ಮುನಿ ಇದನ್ನು ಸಂಸ್ಕೃತ ಭಾಷೆಗೆ ಅನುವಾದಿಸಿರುವ ಕೃತಿ ಸದ್ದರ್ಶನ.

ಸತ್ತತ್ವ ಸಾರಂ ಸರಲಂ ದಧಾನಾ
ಮುಮುಕ್ಷುಲೋಕಾಯ ಮುದಂ ದದಾನ
ಅಮಾನುಷಶ್ರೀ ರಮಣೀಯ ವಾಣೀ
ಮಯೂಖಭಿತ್ತಿರ್ಮುನಿವಾಗ್ವಿಭಾತಿ

ಸರಳ ಸತ್ತತ್ವ ಸಾರವ ಮುಕ್ತಿಸಾಧಕರ
ವರವ, ದೈವೀವಾಣಿ ರಮಣಮುನಿಯಂತಃ
ಕರಣ ಕಿರಣಗಳ ತೆರೆಬಿಂಬ 'ಸದ್ದರ್ಶನದ'
ಮರುಬಿಂಬವಿದು ಕನ್ನಡದ ಕನ್ನಡಿಯಲಿ

ನಿಜ ತತ್ವ ಸಾರವೆಲ್ಲಾ ತುಂಬಿರುವ, ಮುಮುಕ್ಷುಗಳಿಗೆ ಆನಂದವನ್ನು ಕೊಡುವ ರಮಣ ಮಹರ್ಷಿಗಳ ದೈವೀವಾಣಿಯಿದು. ಆ ನುಡಿಯ ಕಾಂತಿಪುಂಜಗಳು ಪ್ರತಿಫಲನವಾದ ತೆರೆ, ಗಣಪತಿ ಮುನಿ ಗ್ರಹಿಸಿ ರಚಿಸಿದ ಸದ್ದರ್ಶನ. ತೆರೆಯ ಮರುಬಿಂಬವನ್ನೇ ಕನ್ನಡದ ಕನ್ನಡಿಯಲ್ಲಿ ಹಿಡಿದಿಡಲು ಯತ್ನಿಸಿದೆ.